ಎಸ್ ಸಿ ನಂ. 1/18 ಪಿ ಡಬ್ಲೂ-1

**<u>ದಿನಾಂಕಃ 05.03.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು</u>.**

**<u>ಮುಂದುವರೆದ ಮುಖ್ಯ ವಿಚಾರಣೆಃ-ಶ್ರೀ ಬಿ ಆರ್ ಕೆ ವಕೀಲರಿಂದಃ</u>**

ನಾನು ಪ್ರಮಾಣ ಪತ್ರಿಕೆಯನ್ನು ಹಾಜರುಮಾಡಿದ್ದು ಅದರಲ್ಲಿನ ಎಲ್ಲಾ ಅಂಶಗಳು ಸತ್ಯದಿಂದ ಕೂಡಿರುತ್ತದೆ.

ನಾನು ಲೀಗಲ್ ನೋಟಿಸ್ ನ ಕಚೇರಿ ಪ್ರತಿ ಹಾಜರು ಮಾಡಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಅಂಚೆ ಸ್ವೀಕೃತಿ ಪತ್ರ ಹಾಜರು ಮಾಡಿದ್ದು ನಿಪಿ-2 ಎಂದು, ನೋಟಿಸ್ ಗೆ ಕೊಟ್ಟ ಉತ್ತರದ ಪ್ರತಿ ಹಾಜರು ಮಾಡಿದ್ದು ನಿಪಿ-3 ಎಂದು ಗುರುತಿಸಲಾಯಿತು.

ನಾನು ಒಂದು ಸಾಲದ ಪತ್ರವನ್ನು ಹಾಜರು ಮಾಡಿದ್ದು ಸದರಿ ದಾಖಲೆಯು ವಾದಿಗೆ ಪ್ರತಿವಾದಿಯು 40 ಸಾವಿರ ಪಡೆದು ಬಡ್ಡಿ ಸಮೇತ ವಾಪಸ್ಸು ಕೊಡುವುದಾಗಿ ಪಡೆದು ದಾಖಲೆಯನ್ನು ಬರೆದುಕೊಟ್ಟಿದ್ದು ಸದರಿ ದಾಖಲೆಯು 50 ರೂ ಮುದ್ರಾಂಕ ಶುಲ್ಕದ ಮೇಲೆ ಬರೆಯಲಾಗಿದ್ದು ಅದು ಕರ್ನಾಟಕ ಮುಂಧ್ರಾಂಕ ಶುಲ್ಕ ಕಾಯ್ದೆ ಪರಿಶಿಷ್ಟದ ಆರ್ ಟಿಕಲ್ 12 ರನ್ನು ಆಕರ್ಷಿಸುತ್ತಿದ್ದು ಅದರಂತೆ ಪ್ರತಿ 100 ರೂಪಾಯಿಗೆ ಮೊದಲ ಸಾವಿರ ರೂಮೇಲೆ 50 ಪೈಸೆಯಂತೆ ಮತ್ತು ಹೆಚ್ಚುವರಿ ಮೊತ್ತದ ಮೇಲೆ ಪ್ರತಿ 500 ರೂ ಗೆ 2 ರೂ 50 ಪೈಸೆಯಂತೆ ಮುಧ್ರಾಂಕ ಶುಲ್ಕ ಪಾವತಿ ಮಾಡಬೇಕಾಗಿದ್ದು ಮುಧ್ರಾಂಕ ಶುಲ್ಕ ಲೆಕ್ಕ ಹಾಕಿದಾಗ 815 ರೂ ಆಗುತ್ತಿದ್ದು ಈಗಾಗಲೇ ಸದರಿ ದಾಖಲೆ ಮೇಲೆ 50 ರೂ ಮುಧ್ರಾಂಕ ಶುಲ್ಕ ಪಾವತಿ ಮಾಡಿರುವುದರಿಂದ ಅದನ್ನು ಕಡಿಮೆ ಮಾಡಿದಾಗ 765 ರೂ ಮುಂಧ್ರಾಂಕ ಶುಲ್ಕ ಮತ್ತು ಸದರಿ ಮೊತ್ತದಂ ಮೇಲೆ 10 ಪಟ್ಟು ದಂಡವನ್ನು ವಿದಿಸಿದಾಗ 7,650 ರೂ ದಂಡ ಪಾವತಿ ಮಾಡಬೇಕಾಗಿದ್ದು ಮುಂಧ್ರಾಂಕ ಶುಲ್ಕ ಮತ್ತು ದಂಡವನ್ನು ಲೆಕ್ಕಹಾಕಿದಾಗ ವಾದಿ ರೂ 8415 ರೂ ದಂಡ ಮತ್ತು ಮುಂಧ್ರಾಂಕ ಶುಲ್ಕ ಪಾವತಿ

ಮಾಡಬೇಕಾಗುತ್ತದೆ ಆದ್ದರಿಂದ ವಾದಿ ಸದರಿ ದಾಖಲೆ ಮೇಲೆ 8415 ರೂ ಮುಂದ್ರಾಂಕ ಶುಲ್ಕ ಮತ್ತು ದಂಡ ಪಾವತಿ ಮಾಡುವಂತೆ ಸೂಚಿಸಿ ಹೆಚ್ಚಿನ ಮುಖ್ಯ ವಿಚಾರಣೆಯನ್ನು ಮುದೂಡಲಾಯಿತು.

**ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು ಸಮಯ ನೀಡಲಾಯಿತು.**

ನನ್ನಃ ಉಃಲೇಃಕ್ಕೆಃ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರದನ್ಯಾದಂ, ಚನ್ನರಾಯಪಟ್ಟಣ